# 83

# ಕರ್ತನಗಾಗಿ ಫಲವನ್ನು ಕೊಡುವದು

## ಯೋಹಾನ 15:1-12, ಒಂದು ನಿಕಟ ನೋಟ

ಮೇಲುಪ್ಪರಿಗೆ ಕೋಣೆ, ಪಸ್ಕರ ಹಬ್ಬ, ಕ್ರೂಜೆಯನ್ನು ತಲುಪುವಿಕೆ, ಸಿದ್ಧಮಾಡುವ ತರಾತುರಿ ಇವೆಲ್ಲವೂ ಯೋಹಾನ 14-16ರಲ್ಲಿನ ಯೇಸುವಿನ ಹೋಲಿಸಲಾಗದ ಬೀಳ್ಕೊಡುಗೆಯ ಬೋಧನೆಯ ಸಿದ್ಧತೆಯು ಆಗಿತ್ತು. ಈ ಬೋಧನೆಯಲ್ಲಿ ಕರ್ತನು ದ್ರಾಕ್ಷೆಬಳ್ಳಿ ಮತ್ತು ಕೊಂಬೆಗಳ ಮೇಲೆ ಸವಾಲಾತ್ಮವಾದ ಸಂದೇಶವನ್ನು ಕೊಟ್ಟನು.

ಯೇಸುವಿನಿಂದ ಬಳಸಲ್ಪಟ್ಟ ಉಪಮೆಯ ಯಾವ ಪ್ರೇರೇಪಣೆ ಮಾಡಿತು ಎಂಬುದರ ಬಗ್ಗೆ ಪಂಡಿತರು ತರ್ಕಮಾಡುವವರಾಗಿದ್ದಾರೆ. ಇದು ಹಣ್ಣಿನ ರಸವಾಗಿದ್ದು ಕರ್ತನ ಭೋಜನದ ಸಂಸ್ಥಾಪನೆಯಲ್ಲಿ ಬಹುಶಃ ಬಳಕೆಯಾಗಿರಬಹುದು. ಬಹುಶಃ ದ್ರಾಕ್ಷೆಬಳ್ಳಿಗಳು ಮನೆಯ ಬದಿಯಲ್ಲಿ ಬೆಳೆಯುತ್ತಿರಬಹುದು ಮತ್ತು ಮನೆಯ ಕಿಟಕಿಯಿಂದ ನೋಡಲು ಸಾಧ್ಯವಾಗುತ್ತಿರಬಹುದು. ಯೇಸು ಬೋಧನೆಯ ಕೊನೆಯ ಭಾಗವನ್ನು ಹೇಳುವ ಮುನ್ನ ಅವರು ಮೇಲುಪ್ಪರಿಗೆ ಕೋಣೆಯಿಂದ ಹೊರಬಂದಿದ್ದರೆ (ನೋಡಿರಿ ಯೋಹಾನ 14:31), ಆ ಚಿಕ್ಕ ಗುಂಪು ದ್ರಾಕ್ಷೆತೋಟದಲ್ಲಿ ಕಂಡುಬರುತ್ತಿತ್ತು. ಅವರು ಬಂಗಾರದ ದ್ರಾಕ್ಷೆ ಮತ್ತು ದ್ರಾಕ್ಷೆ ಗೊಂಚಲಿನ ಹೊಂದಿದ ದೇವಾಲಯವನ್ನು ಹಾದು ಹೋಗಿರಬಹುದು.[1] ಕ್ರಿಸ್ತನು ಹಳೆ ಒಡಂಬಡಿಕೆಯ ಚಿರಪರಿಚಿತ ಹಳೆಯ ಉಪಮೆಯನ್ನು ಬಳಸಲು ಇಚ್ಚೆಯುಳ್ಳವನಾಗಿದ್ದನು (ಕೀರ್ತನೆ 80; ಯೆಶಾಯ 5; ಯೆರೆಮೀಯ 2). ಹೇಗೆ ಆಗಿರಲಿ, ಆತನು ದ್ರಾಕ್ಷೆಯ ಚಿತ್ರಣವನ್ನು ಬಳಸಿದನು ಯಾಕೆಂದರೆ ಈ ಚಿತ್ರಣವು ಎಲ್ಲರೂ ಕೂಡಾ ಅರಿತುಕೊಳ್ಳಬಹದಾದ್ದು ಆಗಿದೆ.

ಯೇಸು ಯಾಕೆ ಈ ಉಪಮೆಯನ್ನು ಬಳಸಿದನು ಎಂಬ ಪ್ರಶ್ನೆಗಿಂತ ಹೆಚ್ಚು ಪ್ರಮುಖವಾದದ್ದು ಆ ದೃಷ್ಟಾಂತವನ್ನು ಸಂಪೂರ್ಣಗೊಳಿಸಲು ಆತನು ಯಾವ ನಿರೀಕ್ಷೆಯನ್ನಿಟ್ಟುಕೊಂಡಿದ್ದಾನೆ ಎಂಬುದೇ ಆಗಿದೆ. ಕೂಡಲೇ ಸ್ವಲ್ಪಕಾಲದಲ್ಲಿಯೇ ಆತನು ಈ ಭೂಮಿಯನ್ನು ಬಿಡುವವನಿದ್ದನು. ಆತನ ಶಿಷ್ಯರು ಆತನ ಕಾರ್ಯದಲ್ಲಿ ಮುಂದುವರೆಯಬೇಕಿತ್ತು. ಅದನ್ನು *ಹೇಗೆ* ಸಂಪೂರ್ಣಗೊಳಿಸಬೇಕು ಎಂಬುದನ್ನು ಅರಿತುಕೊಳ್ಳುವದು ಅವರಿಗೆ ಅವಶ್ಯವಿತ್ತು. ಅದು ಕರ್ತನ ಮಾತುಗಳ ಹಿನ್ನಲೆಯಾಗಿದೆ:

> ನಾನೇ ನಿಜವಾದ ದ್ರಾಕ್ಷೇಬಳ್ಳಿ ನನ್ನ ತಂದೆ ತೋಟಗಾರನು, ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧ ಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ. ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನು ನಿಮ್ಮಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷಾಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿರದ್ದಿರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ. ಯಾವನು ನನ್ನಲ್ಲಿ ನೆಲೆಗೊಂಡಿರುವುದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬೀಸಾಡಲ್ಪಟ್ಟು ಒಣಗಿ ಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟುಹೋಗುತ್ತವೆ. ನೀವು ನನ್ನಲ್ಲಿಯೂ ನನ್ನ ವಾಕ್ಯವು ನಿಮ್ಮಲ್ಲಿ ನೆಲೆಗೊಂಡ್ಡಿರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು. ನೀವು ಬಹಳ ಫಲಕೊಡುವುದರಿಂದಲೇ ನನ್ನ ತಂದೆಗೆ

ಮಹಿಮೆ ಉಂಟಾಗುವದು; ಮತ್ತು ನನ್ನ ಶಿಷ್ಯರಾಗುವಿರಿ. ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನು ನಿಮ್ಮನ್ನು ಪ್ರೀತಿಸಿದ್ದೇನೆ; ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನುಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇಲರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ. ನನ್ನಲ್ಲಿರುವ ಆನಂದವು ಪರಿಪೂರ್ಣವಾಗಬೇಕೆಂಬುದೇ ನಾನು ಕಾಡುವ ಆಜ್ಞೆಯಾಗಿದೆ.

ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ; ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು ನೀವು ಹೊರಟುಹೋಗಿ ಫಲಕೊಡುವವರಾಗಬೇಕೆಂತಲೂ ನೀವು ಕೊಡುವ ಫಲವು ನಿಲ್ಲುವಂಥದ್ದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ. ಹೀಗಿರ ಲಾಗಿ ನನ್ನ ಹೆಸರಿನಲ್ಲಿ ತಂದೆಯನ್ನು ಏನೇನು ಬೇಡಿಕೊಳ್ಳುವಿರೋ ಅದನ್ನು ಆತನು ನಿಮಗೆ ಕೊಡುವನು (ಯೋಹಾನ 15:1-12, 16).

ಈ ಮಾತುಗಳು ಮೂಲತಃವಾಗಿ ಅಪೊಸ್ತಲರಿಗೆ ಮಾತನಾಡಿದ್ದು ಮತ್ತು ಅವರಿಗೆ ವಿಶೇಷ ಪ್ರಾಮುಖ್ಯ ಹೊಂದಿದಂತದ್ದು ಆಗಿದೆ (ಗಮನಿಸಿರಿ 15:16). ಹೇಗೂ, 1 ರಿಂದ 12 ವಚನಗಳಲ್ಲಿ ಸಂದೇಶದ ಹೃದಯಭಾಗವಿದ್ದು ಎಲ್ಲ ಕ್ರೈಸ್ತರಿಗೆ ಅನ್ವಯವಾಗುವುದಾಗಿದೆ.

ಈ ವಚನಗಳ ಮೂಲಕ ಮೂರು ಶ್ರೇಷ್ಟ ಸಂಗತಿಗಳು ಹೊರಡುವವುಗಳು ಆಗಿವೆ: (1) ದೇವರ ಆಜ್ಞೆಗಳನ್ನು ಕೈಕೊಳ್ಳುವದು, (2) ದೇವರಿಗೆ ಫಲವನ್ನು ಕೊಡುವದು, ಮತ್ತು (3) ದೇವರ ಪ್ರೀತಿಯಲ್ಲಿ ನೆಲೆಗೊಂಡಿರುವದು. ಮೂರು ಕಾಲಿನ ಸ್ಟೂಲಿನಂತ, ಈ ಅಂಶಗಳು ಒಂದಕ್ಕೊಂದು ಆಧಾರವಾಗಿವೆ. ಈ ಪ್ರಸಂಗವು ಎರಡನೆಯ ಅಂಶವಾದ - ಫಲಕೊಡುವದರ ಮೇಲೆ ಕೇಂದ್ರಿಕರಿಸುವುದಾಗಿದೆ - ಮತ್ತು ಫಲಕೊಡುವುದರ ಮೇಲೆ ಒತ್ತುಕೊಡಲ್ಪಟ್ಟಿದೆ.[2]

## ಫಲಕೊಡುವ ನೈಜತೆ

ಪರಿಚ್ಛೇದದ ಉದ್ದಕ್ಕೂ ಗುರುತರ ವಿಚಾರವೆಂದರೆ ಕೊಂಬೆಗಳಲ್ಲಿರುವ ದ್ರಾಕ್ಷೆಯು ಉದ್ದೇಶ ವನ್ನು ಹೊಂದಿದೆ, ಆ ಉದ್ದೇಶವು *ಫಲವನ್ನು ಕೊಡುವುದೇ* ಆಗಿದೆ (ವಚನಗಳು 2, 4, 5, 8). ಫಲಗಳನ್ನು ನೀಡದ ಕೊಂಬೆಗಳ ಇರುವಿಕೆಯನ್ನು ತೋಟಗಾರನು ಸಮರ್ಥಿಸಿಕೊಳ್ಳ ಲಾರನು. ಅಪನಂಬಿಕೆಯ ಕೊಂಬೆಗಳು ಫಲಕೊಡುವ ಕೊಂಬೆಗಳಿಂದ ಪೋಷಣೆಯನ್ನು ಪಡೆಯುತ್ತಿರುವುದರಿಂದ ಅವುಗಳು ದ್ರಾಕ್ಷಾಬಳ್ಳಿಯಿಂದ ಕತ್ತರಿಸಲ್ಪಡುತ್ತವೆ (ವಚನಗಳು 2, 6). ಅದರಂತೆಯೇ ಕ್ರೈಸ್ತರಾದಂತ ನಾವು ಫಲಕೊಡುವ ಉದ್ದೇಶವನ್ನು ಹೊಂದಿದ್ದೇವೆ. "ನೀವು ಬಹಳ ಫಲಕೊಡುವುದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು" ಎಂದು ಯೇಸು ಹೇಳುತ್ತಾನೆ (ವಚನ 8). ಫಲವನ್ನು ಕೊಡುವದು ಒಂದು ಆಯ್ಕೆಯಲ್ಲ. ಫಲವನ್ನು ಕೊಡುವದು ಕ್ರೈಸ್ತರ ಇತರ ಕಾರ್ಯಗಳ ಭಾಗವಲ್ಲ. ಫಲವನ್ನು ಕೊಡುವದು ನಮ್ಮ ಉದ್ದೇಶ ವಾಗಿದೆ; ಅದು ಕ್ರಿಸ್ತನ ಬಗ್ಗೆ ಇರುವ ಎಲ್ಲವುಗಳೂ ಆಗಿವೆ. ನಾವು ಫಲವನ್ನು ಕೊಡದೆ ಹೋದರೆ, ನಾವು ಜೀವಿಸುವುದರ ಕಾರಣವನ್ನು ಕಳಕೊಳ್ಳುತ್ತೇವೆ.

ನಾವು ಫಲಕೊಡಬೇಕಾದ "ಫಲವು" ಯಾವದು? ಹೊಸ ಒಡಂಬಡಿಕೆಯು "ಫಲ" ಎಂಬುದಕ್ಕೆ ವಿವಿಧ ರೀತಿಯ ಪದಗಳನ್ನು ಬಳಸಿದೆ.[3] ಯೋಹಾನ 15ರಲ್ಲಿ "ಫಲವು" "ಆತ್ಮನ ಫಲವಾಗಿದೆ" ಎಂದು ಕೆಲವರು ನಂಬುವವರಾಗಿದ್ದಾರೆ. "ಆತ್ಮನ ಫಲವು ಪ್ರೀತಿ, ಸಂತೋಷ ಸಮಾಧಾನ, ತಾಳ್ಮೆ, ಕರುಣೆ, ಒಳ್ಳೆತನ, ನಂಬಿಗಸ್ತಿಕೆ, ಸಭ್ಯತೆ, ಸ್ವನಿಯಂತ್ರಣ ಆಗಿದೆ" ಎಂದು ಪೌಲನು ಬರೆಯುತ್ತಾನೆ (ಗಲಾತ್ಯ 5:22, 23). ಕ್ರಿಸ್ತನಲ್ಲಿರುವ ಗುಣಗಳನ್ನು ನಮ್ಮ ಜೀವಿತದಲ್ಲಿ ಬಳಸಿಕೊಂಡಾಗ "ಫಲಕೊಡುವ" ಆಜ್ಞೆಯನ್ನು ನಾವು ಸಂಪೂರ್ಣ ಗೊಳಿಸಬಹುದು ಎಂದು ಇದಕ್ಕೆ ಹತ್ತಿರವಾದ, ಕೆಲವರು ಒತ್ತಾಯ ಪೂರ್ವಕವಾಗಿ

ಹೇಳುವವರಾಗಿದ್ದಾರೆ. "ಫಲ" ಎಂಬ ಪದವು ಕರ್ತನೊಡನೆ ಜೀವಿಸುವ ಮತ್ತು ಕಾರ್ಯಮಾಡುವ ಎಲ್ಲ ಸಕಾರಾತ್ಮಕ ಅಂಶಗಳನ್ನು ಇದು ಸೂಚಿಸಬಹುದು ಎಂದು ಇತರರು ವ್ಯಕ್ತಪಡಿಸುವವರಾಗಿದ್ದಾರೆ. "ನನಗಾದರೋ ಬದಕುವುದೆಂದರೆ ಕ್ರಿಸ್ತನೇ ... ಶರೀರದಲ್ಲಿಯೇ ಬದುಕಬೇಕಾದಲ್ಲಿ ಕೆಲಸಮಾಡಿ ಫಲ ಹೊಂದಲು ನನಗೆ ಅನುಕೂಲವಾಗುವದು" ಎಂದು ಪೌಲನು ಹೇಳಿದನು (ಫಿಲಿಪ್ಪಿ 1:21, 22). KJVಯಲ್ಲಿ "ಇದು ನನ್ನ ಕಾರ್ಯದ ಫಲವು" ಎಂದಿದೆ.

"ಫಲ" ಎಂಬ ಪದದ ಸಾಮಾನ್ಯ ಬಳಕೆಯು ಬೈಬಲ್ಲಿನಲ್ಲಿ ಮರು ಉತ್ಪತ್ತಿಯೊಡನೆ ಮತ್ತು ಮರು ಉತ್ಪತ್ತಿಯ ಪರಿಣಾಮಗಳ ಜೊತೆಯಲ್ಲಿ ಎಣಿಸುವುದಾಗಿದೆ (ಆದಿಕಾಂಡ 1:11; ಲೂಕ 1:42). ಸೇಬಿನ ಮರದಲ್ಲಿ ಸೇಬು ಇರುವುದಾಗಿದೆ, ಕಿತ್ತಲೆಯ ಮರದಲ್ಲಿ ಕಿತ್ತಲೆಯು ಇರುವುದಾಗಿದೆ, ಹಾಗೂ ಒಬ್ಬ ಕ್ರೈಸ್ತನ ಫಲವು ಇನ್ನೊಬ್ಬ ಕ್ರೈಸ್ತನನ್ನು ಉತ್ಪಾದಿಸುವಲ್ಲಿ ಎಂದು ಕೆಲವರು ಗಮನಿಸುವವರಾಗಿದ್ದಾರೆ (ಆದಿಕಾಂಡ 1:28; ಇದನ್ನು ಸಹ ನೋಡಿರಿ ಆದಿಕಾಂಡ 9:1, 7). ಆತ್ಮೀಕ ಜಗತ್ತಿನಲ್ಲಿ ಇದಕ್ಕೆ ಸಮಾನವಾದ ಸವಾಲುಗಳು ಅಸ್ತಿತ್ವದಲ್ಲಿವೆ. ಪೌಲನು ಹೀಗೆ ಬರೆಯುತ್ತಾನೆ,

> ಹಾಗೆಯೇ ನನ್ನ ಸಹೋದರರೇ, ನೀವೂ ಸಹ ಕ್ರಿಸ್ತನ ದೇಹದ ಮೂಲಕವಾಗಿ ಧರ್ಮಶಾಸ್ತ್ರದ ಪಾಲಿಗೆ ಸತ್ತಿರಿ. ದೇವರಿಗೆ ಫಲವಾಗುವುದಕ್ಕಾಗಿ ಮತ್ತೊಬ್ಬನನ್ನು ಅಂದರೆ [ಅದು ಇನ್ನೊಬ್ಬರನ್ನು ಮದುವೆಯಾಗುವದು] ಸತ್ತು ಜೀವಿತವಾಗಿ ಎದ್ದಾತನನ್ನು [ಅದು ಕ್ರಿಸ್ತನು] ಸೇರಿಕೊಂಡಿರಿ (ರೋಮಾಪುರ 7:4).

ರೋಮಾಪುರ 7:4ರಲ್ಲಿ "ಫಲ" ಎಂಬ ಪದವು ಬಹುಶಃ ಸಮಾನ್ಯರ್ಥದಲ್ಲಿ ಬಳಿಕೆಯಾಗಿದೆ, ಆದರೆ ಮದುವೆಯ ಉದಾಹರಣೆಯು ಮಕ್ಕಳ ಆತ್ಮೀಕ ಮಕ್ಕಳ "ಫಲ"ವನ್ನು ಸೂಚಿಸುವುದಾಗಿದ್ದು ಅವರು ಹೊಸ ಕ್ರೈಸ್ತರಾಗಿದ್ದಾರೆ. ಪೌಲನು ರೋಮಾದ ಸಭೆಗೆ ಬರೆಯುವಾಗ ಆತನು ತಾನೇ ಫಲಕೊಡುವವನಾಗಿದ್ದುಕೊಂಡು ಮಾತನಾಡುತ್ತಿರಬಹುದು. "ಸಹೋದರರೇ, ನನ್ನ ಕೆಲಸವು ಇತರರಲ್ಲಿ ಸಫಲವಾಗುವಂತೆ ನಿಮ್ಮಲ್ಲಿಯೂ ಸಫಲವಾದೀತೆಂದು" ತಾನು ಅವರನ್ನು ಭೇಟಿಯಾಗುವುದಾಗಿ ಆ ಸಹೋದರರಿಗೆ ಹೇಳುತ್ತಾನೆ (ರೋಮಾಪುರ 1:13).

ಯೋಹಾನ 15ರ "ಫಲಕ್ಕೆ" ಸಂಬಂಧಿಸಿದಂತೆ, ಸೂಚಿತವಾದ ಸಾಧ್ಯತೆಗಳ ಮಧ್ಯವನ್ನು ನಾವು ಆರಿಸಿಕೊಳ್ಳುವದು ಅವಶ್ಯವೇ? ಸಕಾರಾತ್ಮಕ ಪರಿಣಾಮದಲ್ಲಿ ಹೊಂದಿರುವ ಆತ್ಮದ ಫಲವನ್ನು ಬೆಳಿಸಿಕೊಳ್ಳದೆ ನಾವು ಕ್ರೈಸ್ತರಹಿತ ಗುಣಗಳನ್ನು ನಾವು ಬೆಳಿಸಿಕೊಳ್ಳಬಹುದೇ? ಕಳೆದುಕೊಂಡಿದ್ದನ್ನು ತಲುಪಲು ನಾವು ಯಾವ ಶ್ರಮವನ್ನೂ ಮಾಡದೇ ಇದ್ದರೆ ನಾವು ಕ್ರಿಸ್ತನ ಹಾಗೆ ಇರುವ ಮತ್ತು ಆತ್ಮದಿಂದ ತುಂಬದವರಾಗಿರಬಹುದೇ? "ಕೆಟ್ಟು ಹೋಗಿರುವವರನ್ನು ಹುಡುಕಿ ರಕ್ಷಿಸಲು ಬಂದಿದ್ದೇನೆ" ಎಂದು ಕ್ರಿಸ್ತನು ತಾನು ಬಂದಿರುವುದರ ಬಗೆಗೆ ಹೇಳುತ್ತಾನೆ (ಲೂಕ 19:10), ಮತ್ತು ನಾವು ಆತನ ಹೆಜ್ಜೆಯನ್ನು ಅನುಸರಿಸಬೇಕು (1 ಪೇತ್ರ 2:21). ನಮ್ಮ ನಂಬಿಕೆಯನ್ನು ಹಂಚಿಕೊಳ್ಳುವ ಮಹತ್ವವನ್ನು ನಾವು ಗುರುತ್ತಿದ್ದೇವೆ ಆದ್ದರಿಂದ ನಮ್ಮ ಆತ್ಮವು ರಕ್ಷಿಸಲ್ಪಡಬಹುದು.

ಈ ಅನ್ವಯವನ್ನು ಮನದಲ್ಲಿಟ್ಟುಕೊಂಡು, ಇದನ್ನು ಪರಿಗಣಿಸಿರಿ: ಆ ದ್ರಾಕ್ಷಾಬಳ್ಳಿಯು ಫಲವನ್ನು ಕೊಡದಂಥದ್ದಾಗಿದೆ; ಅದು ಕೊಂಬೆಗಳ ಕಾರ್ಯವಾಗಿದೆ. ದ್ರಾಕ್ಷಾಬಳ್ಳಿಯು ಕೊಂಬೆಯು ತಮ್ಮ ಕಾರ್ಯವನ್ನು ಮಾಡಲು *ಶಕ್ತಿಗೊಳಿಸುವುದಾಗಿದೆ,* ಆದರೆ ಕೊಂಬೆಗಳು ತಾವೇ ಫಲವನ್ನು ಉತ್ಪತ್ತಿಮಾಡಲೇಬೇಕು. ನಾನು ಮತ್ತು ನೀವು ಕಳೆದುಹೋದದ್ದನ್ನು ಮುಟ್ಟಲು ವಿಫಲವಾಗಿದ್ದೇ ಆದರೆ, ಯಾರೊಬ್ಬರೂ ರಕ್ಷಿಸಲ್ಪಡಲಾರರು.

ಹೊಸಒಡಂಬಡಿಕೆಯಲ್ಲಿ, ಇದು ಕ್ರೈಸ್ತನಾಗಿ ಇರುವ ಸ್ವಾಭಾವಿಕ ಪರಿಣಾಮದಂತೆ

ಪರಿಗಣಿಸಲ್ಪಡುವ ಹಾಗೆ ಒಬ್ಬನ ನಂಬಿಕೆಯನ್ನು ಹಂಚಿಕೊಳ್ಳುವದು ಆಜ್ಞೆಯ ಹಾಗಲ್ಲದ್ದು ಆಗಿದೆ: "ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ. ಅವರಿಗೆ ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿರಿ" (ಮತ್ತಾಯ 28:19) ಎಂಬ ಮತ್ತಾಯ ಪ್ರಕಾರದ ಶ್ರೇಷ್ಟ ನಿಯೋಗಕ್ಕೆ ನಮ್ಮಲ್ಲಿ ಅನೇಕರು ಚಿರಪರಿತರಾಗಿದ್ದೇವೆ. ಪರಿಚ್ಛೇದವು ಅಕ್ಷರಸಹ ಒಬ್ಬರ ವಶಕ್ಕೆ ಒಪ್ಪಿಕೊಡುವದು ಆಗಿದ್ದು "ಆದ್ದರಿಂದ ನೀವ ಹೊರಟುಹೋಗುವದು ಮತ್ತು ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡುವದು" ಎಂದಾಗಿದೆ.[4] ಇನ್ನೊಂದು ಮಾತಿನಲ್ಲಿ, "ನೀವು *ಹೋಗುತ್ತಿರುವಾಗ* (ಅಥವಾ, ನೀವು *ಹೋಗುತ್ತಿರುವಂತೆ*), ನೀವು ಭೇಟಿಯಾಗುವ ಪ್ರತಿಯೊಬ್ಬರಿಗೂ ಕಲಿಸಿರಿ." ಯೆರೂಸಲೇಮಿನ ಸಭೆಯು ಹಿಂಸೆಯಿಂದ ಚದುರಿಹೋದಾಗ ಇದೇ ಸಂಭವಿಸಿತು.

> ... ಆ ದಿವಸ ಯೆರೂಸಲೇಮಿನಲ್ಲಿದ್ದ ಸಭೆಗೆ ದೊಡ್ಡ ಹಿಂಸೆ ಉಂಟಾಯಿತು. ಅಪೊಸ್ತಲರ ಹೊರತಾಗಿ ಎಲ್ಲರು ಯೂದಾಯ ಸಮಾರ್ಯ ಸೀಮೆಗಳಲ್ಲಿ ಚದುರಿಹೋದರು.
>
> ಚದುರಿ ಹೋದವರು ಅಲ್ಲಿ ಹೋಗಿ ಸುವಾರ್ತಾವಾಕ್ಯವನ್ನು ಸಾರುತ್ತಿದ್ದರು (ಅಪೊಸ್ತಲರ ಕೃತ್ಯಗಳು 8:1, 4).

ನಾವು ಏನನ್ನು ಹಂಚಿಕೊಳ್ಳಬೇಕೆಂದು ನಾವು ಅರಿತುಕೊಂಡಿದ್ದಾದರೆ, ಆಗ ಹಂಚಿಕೊಳ್ಳುವದು, ನಮಗೆ *ಸ್ವಾಭಾವಿಕ* ವಾದದ್ದಾಗಿರುತ್ತದೆ. ಯೇಸುವಿನಲ್ಲಿಯ ನಮ್ಮ ನಂಬಿಕೆಯನ್ನು ನಾವು ಹಂಚಿಕೊಳ್ಳುತ್ತಿದ್ದೇವೆ; ನಾವು ಸುವಾರ್ತೆಯನ್ನು, ಒಳ್ಳೆಯ ವಾರ್ತೆಯನ್ನು ಹಂಚಿಕೊಳ್ಳುತ್ತಿದ್ದೇವೆ. ಈಗ ತಾನೇ ತನ್ನ ನಿಶ್ಚಿತಾರ್ಥವನ್ನು ಮಾಡಿಕೊಂಡಿರುವ ಯೌವನಸ್ಥೆಯು ತನ್ನ ನಿಶ್ಚಿತಾರ್ಥದ ರಿಂಗನ್ನು ತೋರಿಸಲು ಬೇಡಲ್ಪಡುವುದಿಲ್ಲ. ಅವಳು ತನ್ನ ರಿಂಗನ್ನು ಪ್ರತಿಯೊಬ್ಬರಿಗೂ ತೋರಿಸುವದು *ಸ್ವಾಭಾವಿಕವಾದದ್ದಾಗಿದೆ.* ಹೊಸದಾಗಿ ತಂದೆಯಾದವನು ತನ್ನ ಹೊಸದಾಗಿ ಹುಟ್ಟಿದ ಮಗುವಿನ ಬಗ್ಗೆ ಇತರರಿಗೆ ಹೇಳುವುದಕ್ಕಾಗಿ ಆತನನ್ನು ಮನ ವೊಲಿಸಬೇಕಾಗಿಲ್ಲ ಮತ್ತು ಒಬ್ಬ ಅಜ್ಜಿಗೆ ತನ್ನ ಹೊಸ ಮೊಮ್ಮಕ್ಕಳ ಫೋಟೋವನ್ನು ನಿಮಗೆ ತೋರಿಸಲು ನೀವು ನಿಶ್ಚಯವಾಗಿ ಒತ್ತಾಯವನ್ನು ಹೊಂದಿರುವುದಿಲ್ಲ. ಆ ಒಳ್ಳೆಯ ವಾರ್ತೆಯನ್ನು ಹಂಚಿಕೊಳ್ಳುವದು ಅವರಿಗೆ *ಸ್ವಾಭಾವಿಕವಾದದ್ದು* ಆಗಿದೆ. ಜಗತ್ತಿನಲ್ಲಿ ದುಃಖದಿಂದ ಕೂಡಿದ್ದಾಗಲೂ, ಜಗತ್ತು ಸುವಾರ್ತೆಗಾಗಿ ಹಸಿದಿದೆ.[5] ನಾವು ಯೇಸುವಿನ ಒಳ್ಳೆಯ ವಾರ್ತೆಯನ್ನು ಹೊಂದಿದ್ದೇವೆ! ಸುವಾರ್ತೆಯನ್ನು ಹಂಚಿಕೊಳ್ಳುವದು ನಮಗೆ ಎಷ್ಟೋ ಸ್ವಾಭಾವಿಕವಾದದ್ದಾಗಿದೆ!

ಕೆಲವರು ಹೀಗೆ ಕೇಳಬಹುದು "ಹೇಗೆ? ನಾನು ನನ್ನ ನಂಬಿಕೆಯನ್ನು ಹೇಗೆ ಹಂಚಿಕೊಳ್ಳಬೇಕು? ಯೇಸುವಿಗಾಗಿ ಇತರರನ್ನು ಜಯಿಸುವ ರೀತಿಯಲ್ಲಿ ನಾನು ಯಾವ ರೀತಿಯಲ್ಲಿ ಫಲಕೊಡಬಹುದು?" ಪರಿಚ್ಛೇದವು ಹೇಗೆ ಎಂದು ನಮಗೆ ಹೇಳದು; ಹಂಚಿಕೊಳ್ಳುವದು ಅವಶ್ಯವಾದದ್ದು ಎಂದು ಮಾತ್ರ ಇದು ಸೂಚಿಸುವುದಾಗಿದೆ. ನಮ್ಮ ನಂಬಿಕೆಯನ್ನು ಹಂಚಿಕೊಳ್ಳುವುದಕ್ಕೆ ಡಝನ್‌ಗಟ್ಟಲೆ. ನೂರುಗಟ್ಟಲೇ ಕೂಡಾ ಒಳ್ಳೆಯ ಪದ್ಧತಿಗಳು ಇವೆ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಭಿನ್ನವಾಗಿವೆ; ಒಬ್ಬನಿಗೋಸ್ಕರ ಕೆಲಸಮಾಡುವವನು ಇನ್ನೊಬ್ಬನಿಗಾಗಿ ಕೆಲಸಮಾಡನು.[6] ನೀವು ಯಾವುದೇ ಪದ್ಧತಿಯನ್ನು ಬಳಸಿರಿ, ಆ ಪದ್ಧತಿಯು *ಜೀವಿತ ಮತ್ತು ಬೋಧನೆ* ಎರಡನ್ನೂ ಒಳಗೊಂಡಿರಲೇಬೇಕು. ಪೌಲನು ಈ ಎರಡೂ ವಾಸ್ತವಗಳನ್ನು ಫಿಲಿಪ್ಪಿ 2:15, 16ರಲ್ಲಿ ಜೊತೆಗೋಡಿಸಿದ್ದಾನೆ:

> ಹೀಗೆ ನೀವು ನಿರ್ದೋಷಿಗಳೂ ಯಥಾರ್ಥಮನಸ್ಸುಳ್ಳವರೂ ಆಗಿದ್ದು ವಕ್ರಬುದ್ಧಿಯುಳ್ಳ ಮೂರ್ಖಜಾತಿಯ ಮಧ್ಯದಲ್ಲಿ ದೇವರ ನಿಷ್ಕಳಂಕ ಮಕ್ಕಳಾಗಿರುವಿರಿ. ಇವರೊಳಗೆ ನೀವು

ಸರ್ವರಿಗೂ ಜೀವದಾಯಕ ವಾಕ್ಯವನ್ನು ತೋರಿಸಿಕೊಡುವವರಾಗಿದ್ದು ಲೋಕದೊಳಗೆ ಹೊಳೆಯುವ ಜ್ಯೋತಿರ್ಮಂಡಲಗಳಂತೆ ಕಾಣಿಸುವವರಾಗಿದ್ದೀರಾ ... ನಾನು ಪ್ರಯಾಸಪಟ್ಟಿದ್ದು ವ್ಯರ್ಥ್ಯವಲ್ಲ ಎಂಬ ಉತ್ಸಾಹವು ಕರ್ತನ ದಿನದಲ್ಲಿ ನನಗೆ ಉಂಟಾಗುವದು ...

(1) *ಜೀವಿತ.* ಸಕಾರಾತ್ಮಕವಾಗಿ ಮತ್ತು ನಕಾರಾತ್ಮಕವಾಗಿ ಎರಡರಲ್ಲೂ ನೀವು ನಂಬಿಗಸ್ತ ಕ್ರಿಸ್ತೀಯ ಜೀವಿತವನ್ನು ಜೀವಿಸಲೇಬೇಕು. ಸಕಾರಾತ್ಮಕವಾಗಿ ನೀವು ಒಳ್ಳೆಯ ಜೀವಿತವನ್ನು, ಪ್ರೀತಿಯ ಮತ್ತು ಇತರರಿಗೆ ಸಹಾಯಿಸುವ ಜೀವಿತವನ್ನು ಜೀವಿಸಲೇಬೇಕು. ನಕಾರಾತ್ಮಕವಾಗಿ, ನೀವು ಪರಿಶುದ್ಧರಾಗಿ ಉಳಿಯುವ ನಿಟ್ಟಿನಲ್ಲಿ ಕೆಟ್ಟತನವನ್ನು ನಿಮ್ಮ ಜೀವಿತದಿಂದ ನೀವು ಹೊರಗಿಡಲೇಬೇಕು. ನಿಮ್ಮ ಬೋಧನೆಯೊಂದಿಗೆ ಯೋಗ್ಯವಾಗಿ ನಿಮ್ಮ ಜೀವಿತವನ್ನು ನಡೆಸದೆ ಹೋದರೆ, ಯಾರೊಬ್ಬರೋ ನಿಮ್ಮ ಬೋಧನೆಯನ್ನು ಕೇಳರು.[7]

(2) *ಬೋಧನೆ.* ನಿಮ್ಮ ಜೀವಿತ ಹೇಗೇ ಇದ್ದರೂ ನೀವೂ ಸಹ ಸುವಾರ್ತೆಯನ್ನು ಬೋಧಿಸಲೇಬೇಕು. ಕೇವಲ ತಾವು ಸತ್ಯದ ಪ್ರಕಾರ ಜೀವಿಸುತ್ತಿರುವಂತೆ, ಅವರಿಗೆ ಸತ್ಯವನ್ನು ಬೋಧಿಸುವದು ಅವಶ್ಯವಿಲ್ಲ ಎಂದು ಕೆಲವರು ಯೋಚಿಸುವವರಾಗಿರುತ್ತಾರೆ. ನೀವು ಯೇಸುವಿಗಿಂತ ಯೋಗ್ಯರೇ? ಆತನು ತನ್ನಷ್ಟಕ್ಕೆ ತಾನೇ ಫಲವನ್ನು ಕೊಡಲಾರನು. ಆತನು ಸತ್ಯದಲಿಲ ಜೀವಿಸಿದನು, ಆದರೆ ಆತನೂ ಸಹ ಬೋಧಿಸಿದನು. ಬೋಧನೆಯು ಪತ್ರಗಳ ಮೂಲಕ, ಕರಪತ್ರಗಳ ಜೊತೆ ಚಿತ್ರಸುರುಳಿಗಳ ಮತ್ತು ವಿಡಿಯೋಗಳ ಮೂಲಕ, ಅಥವಾ ಮುಖಾಮುಖಿಯಾಗಿ ಸಂಪೂರ್ಣಗೊಳ್ಳುವದಾಗಿದೆ. ಪ್ರಮುಖವಾದ ಸಂಗತಿ ಎಂದರೆ ನೀವು ಇತರರಿಗೆ ಎಷ್ಟು ಬೋಧಿಸುತ್ತೀರಿ ಎಂಬುದಲ್ಲ, ಆದರೆ ನೀವು ಅವರಿಗೆ ಬೋಧಿಸುವುದೇ ಆಗಿದೆ.

ನಾನು ಇದೇ ವಿಚಾರಕ್ಕೆ ಮರಳಿಬರುತ್ತೇನೆ: ಯೋಹಾನ 15ರ ಪ್ರಕಾರ, ಫಲವನ್ನು ಕೊಡುವದು ಎಂದರೆ ಎಲ್ಲದರಲ್ಲಿ ಕ್ರೈಸ್ತನಾಗಿರುವುದು ಎಂದರೇನು ಎಂಬುದಾಗಿದೆ. ಕೊಂಬೆಗಳಂತೆ ನಮ್ಮ ಪಾತ್ರದ ಮಹತ್ವದ ಬಗ್ಗೆ ನಾವು ಅರಿತುಕೊಂಡಾಗ ಮಾತ್ರ ಫಲಕೊಡುವ ಮಾರ್ಗವನ್ನು ನಾವು ಅರಿತುಕೊಳ್ಳಬಲ್ಲೆವು.

## ಫಲಕೊಡುವದರ ಸಂಬಂಧ

ಫಲಕೊಡುವುದರ ಬಗೆಗಿನ ಕ್ರಿಸ್ತೀಯ ಬೋಧನೆಯ ಮುಖ್ಯ ಒತ್ತಾಯವು *ಕ್ರಿಸ್ತನನ್ನು ಬಿಟ್ಟು* ನಾವೆಂದಿಗೂ ಫಲವನ್ನು ಕೊಡಲಾರೆವು ಎಂಬುದೇ ಆಗಿದೆ. ವಚನ 4 “ನೀವು ನನ್ನಲ್ಲಿ ನೆಲೆಗೊಂಡಿರ್ರಿ” ಎಂದು ಪ್ರಾರಂಭವಾಗುತ್ತದೆ.

ದ್ರಾಕ್ಷೇ ಬಳ್ಳಿ ಮತ್ತು ದ್ರಾಕ್ಷೇ ರಸಗಳ ಮಧ್ಯದ ಸಾಮ್ಯದ ಬಗ್ಗೆ ನೀವು ವೈಜ್ಞಾನಿಕ ಉಪನ್ಯಾಸವನ್ನು ಕೊಡಬಹುದು. ನಾವು osmosis ದ ಪ್ರತಿಕ್ರಿಯೆಯ ಬಗ್ಗೆ ಮಾತನಾಡಬಹುದು: ದ್ರಾಕ್ಷಾಬಳ್ಳಿಯ ಬೇರುಗಳು ಮಣ್ಣಿನಿಂದ ನೀರನ್ನು ಮತ್ತು ಪೋಷಣೆಯನ್ನೂ ಕೊಂಬೆಗಳಿಗೆ ವರ್ಗಾಯಿಸುವವುಗಳು ಆಗಿವೆ. ನಾವು ದ್ವಿತಿ ಸಂಶ್ಲೇಷಣೆಯ ಬಗ್ಗೆಯೂ ಚರ್ಚಿಸಬಹುದು: ಸೂರ್ಯನ ಕಿರಣಗಳು ಎಲೆಗಳ ಪತ್ರಹರಿತ್ತಿನ[8] ಮೇಲೆ ಕಾರ್ಯಮಾಡುವವು ಆಗಿವೆ. ಹೇಗೂ ಇದು ತೋಟಗಾರಿಕೆಯ ಮೇಲೆ ಪಾಠವಲ್ಲ, ಆದರೆ ಸಂಬಂಧಗಳ ಮೇಲಿನ ಪ್ರಸಂಗವಾಗಿದೆ. ನೀವು osmosis ಮತ್ತು ಪತ್ರಹರಿತ್ತನ್ನು ಅರಿತಕೊಳ್ಳಬಹುದು ಅಥವಾ ಅರಿತೊಳ್ಳದೆ ಹೋಗಬಹುದು, ಆದರೆ ನೀವು ಇದನ್ನು ಅರಿತುಕೊಳ್ಳಬಹುದು: ಈ ಕೊಂಬೆಯು ದ್ರಾಕ್ಷಾಬಳ್ಳಿಗೆ ಅಂಟಿಕೊಂಡಿದ್ದರೆ ಮಾತ್ರ ಇದಕ್ಕೆ ಜೀವವಿದೆ. ಕೊಂಬೆಯು ಹಿಂದಿನ ದಿನಗಳಲ್ಲಿ ಎಷ್ಟರಮಟ್ಟಿಗೆ ಬೆಳೆಯಿತು, ಎಷ್ಟು ಉದ್ದ ಅಥವಾ ಎಷ್ಟು ದಪ್ಪ ಕೊಂಬೆಯು ಇದು ಎಂಬುದಾಗಲಿ, ಇದು ಎಷ್ಟು ಹಸಿರಾಗಿ ಅಥವಾ ಅರೋಗ್ಯಯುತವಾಗಿ ಕಾಣುವದು ಅಥವಾ ಎಷ್ಟು

ಆಕರ್ಷಣೀಯವಾಗಿರಬಹುದು ಎಂಬ ಅಂಶವು ಮುಖ್ಯವಲ್ಲ, ಆ ಕೊಂಬೆಯು ದ್ರಾಕ್ಷಾಬಳ್ಳಿಗೆ ಅಂಟಿಕೊಂಡಿರದೆ ಇದ್ದರೆ ಅದು ಸತ್ತದ್ದಾಗಿದೆ.

ಅದೇ ರೀತಿಯದ್ದು ಕ್ರಿಸ್ತನೊಡನೆಯ ನಮ್ಮ ಸಂಬಂಧ ರೀತಿಯಲ್ಲಿಯೂ ನಿಜವಾದದ್ದಾಗಿದೆ: ಆತನು ನಮ್ಮ ಆತ್ಮೀಕ ಜೀವಿತಕ್ಕೆ ಮತ್ತು ಬೆಳವಣಿಗೆಗೆ ಅವಶ್ಯವಾದವನಾಗಿದ್ದಾನೆ. ನಾವು ಆತನಲ್ಲಿ ದೀಕ್ಷಾಸ್ನಾನ ಹೊಂದಿದ್ದೇವೆ (ರೋಮಾಪುರ 6:3-6; ಗಲಾತ್ಯ 3:26, 27). ಆತನಲ್ಲಿ, ನಾವು ಹೊಸ ಸೃಷ್ಟಿಗಳಾಗಿದ್ದೇವೆ (2 ಕೊರಿಂಥ 5:17). ಎಲ್ಲಾ ಆತ್ಮೀಕ ಆಶೀರ್ವಾದಗಳು ಆತನಲ್ಲಿ ಇವೆ (ಎಫೆಸ 1:3). ಆತನಲ್ಲಿಯೇ ನಮಗೆ ಬಿಡುಗಡೆಯು ಇದೆ (ಕೊಲಸ್ಸೆ 1:13, 14).

ನಾವು ಗೆಲ್ಲಬಹುದಾದ ರೀತಿಯಲ್ಲಿ ಆತ್ಮಗಳು ಯಾಕೆ ಗೆಲ್ಲುತ್ತಿಲ್ಲ? ನಾವು ನಮ್ಮ ಫಲಗಳನ್ನು ಯಾಕೆ ಹಂಚಿಕೊಳ್ಳುತ್ತಿಲ್ಲ? ನಾವು ಯಾಕೆ ಆತ್ಮೀಕವಾಗಿ ಬೆಳೆಯುತ್ತಿಲ್ಲ? ದೈವೀಕ ಕ್ರಿಸ್ತೀಯ ಜೀವಿತವನ್ನು ನಾವು ಯಾಕೆ ಜೀವಿಸುತ್ತಿಲ್ಲ? ನಮ್ಮ ಹಾಜರಾತಿಯಲ್ಲಿ ನಾವು ಯಾಕೆ ನಂಬಿಗಸ್ತರಾಗಿಲ್ಲ? ಎಂದೂ ಸಹ ನಮ್ಮಲ್ಲಿ ಕೆಲವರು ಕೇಳಿಕೊಳ್ಳಬಹುದು. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವು ಒಂದೇ ಆಗಿದೆ ಅದು, *ಕ್ರಿಸ್ತನೊಡನೆಯ ನಮ್ಮ ಸಂಬಂಧವು ಸರಿಯಾಗಿಲ್ಲ.* "... ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳಫಲಕೊಡುವನು" (ಯೋಹಾನ 15:5). ಸಂಬಂಧವು ಸರಿಯಾಗಿದ್ದದ್ದೇ ಆದರೆ, ನಾವು ಫಲವನ್ನು ಕೊಟ್ಟೇ ಕೊಡುವೆವು.

ಸಂಬಂಧಗಳು ಮೂಲವಾಗಿವೆ. ಒಂದು ವೈಯಕ್ತಿಕ ದೃಷ್ಟಾಂತವನ್ನು ಬಳಸಲು ನನಗೆ ಅಪ್ಪಣೆ ಕೊಡಿರಿ. ನನ್ನ ಕೆಲಸದ ಪಟ್ಟಿಯು ತುಂಬಿತುಳುಕಿ ನಾನು ತುಂಬಾ ದಣಿದಂಥ ಮತ್ತು ನನು ನನ್ನ ಆರ್ಥಿಕ ನಿರ್ವಹಣೆಯ ಬಗ್ಗೆ ನಾನು ಯೋಚಿಸುತ್ತಿರುವ ದಿನದತ್ತ ನನ್ನ ಮನವು ಸಾಗುತ್ತದೆ. ನನ್ನ ಹೆಣ್ಣು ಮಕ್ಕಳಲ್ಲಿ ಒಬ್ಬಳು "ಡ್ಯಾಡಿ ನನಗೆ ಸಹಾಯಬೇಕಾಗಿದೆ! ನನಗೆ ನಿಜವಾಗಿಯೂ ಸಹಾಯವು ಬೇಕಾಗಿದೆ!" ಎಂದು ತವಕದಿಂದ ಫೋನ್ ಮಾಡಿ ಹೇಳಿದಳು. "ನಾನು ತುಂಬಾ ದಣಿದಿದ್ದೇನೆ" ಎಂದು ನಾನು ಹೇಳಲಿಲ್ಲ. "ನಾನು ತುಂಬಾ ಬಿಜಿಯಾಗಿದ್ದೇನೆ" ಎಂದೂ ನಾನು ಹೇಳಲಿಲ. "ನನ್ನ ಹತ್ತಿರ ಹಣವಿಲ್ಲ" ಎಂದೂ ನಾನು ಹೇಳಲಿಲ್ಲ. "ನಿನಗೆ ಬೇಕಾದ ಸಹಾಯವನ್ನು ನಾನು ಹೇಗೆ ಕೊಡಲಿ" ಎಂದೂ ಕೂಡಾ ನಾನು ಹೇಳಲಿಲ್ಲ. ನನಗೆ ಹೇಗೆ ಸಹಾಯ ಮಾಡಬೇಕು ಗೊತ್ತಿರದೆ ಇದ್ದ ಪಕ್ಷದಲ್ಲಿ ಇತರರಿಂದ ಕೇಳಿ ತಿಳುಕೊಳ್ಳುತ್ತಿದ್ದೆನು. ಒಂದಿಲ್ಲ ಒಂದು ಮಾರ್ಗದಿಂದ ನಾನು ನನ್ನ ಮಗಳಿಗೆ ಸಹಾಯಮಾಡಲೇ ಬೇಕು. ಯಾಕೆ? ಯಾಕೆಂದರೆ ನಾವ ವಿಶೇಷ ಸಂಬಂಧವನ್ನು ಹೊಂದಿದ್ದೇವೆ.

ಆ ತಾಸಿನ ಪ್ರಶ್ನೆಯು "ಯೇಸುವಿನೊಡನೆ ನೀವು ಯಾವ ತರದ ಸಂಬಂಧವನ್ನು ಹೊಂದಿದ್ದೀರಿ?" ಎಂದಾಗಿತ್ತು. ಅದು, ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದ್ದರೆ; ಮತ್ತು ನಾವು ಹೊಂದಿದ್ದಾದರೆ, ಈಗ ನಾವು ಆತನಿಗೋಸ್ಕರ ಜೀವಿಸುತ್ತಿದ್ದೇವೆಯಾ? ಯೋಹಾನನು ತನ್ನ ಮೊದಲ ಪ್ರತಿಕೆಯಲ್ಲಿ ವೈಯಕ್ತಿಕ ಆಧಾರದ ಮೇಲೆ ಯೇಸುವಿನಲ್ಲಿ ನೆಲೆಗೊಳ್ಳುವ ವಿಷಯವನ್ನು ಇರಿಸಿದ್ದಾನೆ (1 ಯೋಹಾನ 2:6), ಆತನಲ್ಲಿ ನೆಲೆಗೊಂಡಿರುವವನು ಆತನು ನಡೆದ ಹಾಗೆ ನಡೆಯುವವನು (2:9, 10), ಮತ್ತು ಪಾಪಮಯವಾದ ಜೀವನ ರೀತಿಯಲ್ಲಿ ಮುಂದುವರೆಯವದನು (3:6) ಆಗಿದ್ದಾನೆ. ನಾನು ಯೇಸುವಿನೊಡನೆ ಸರಿಯಾದ ಸಂಬಂಧವನ್ನು ಹೊಂದಿದ್ದಾದರೆ, ಫಲವನ್ನು ಕೊಡಲು ನನ್ನಷ್ಟಕ್ಕೆ *ನಾನೇ ಮಾರ್ಗವನ್ನು ಕಂಡುಕೊಳ್ಳುವವರಾಗಿದ್ದೇನೆ.*

ಯೋಹಾನ 15:1-12ರಲ್ಲಿ ಫಲವನ್ನ ಕೊಡಲು ವಿಫಲವಾಗುವ ಸಂಗತಿಗಳ ಬಗ್ಗೆ ಕೆಲ ಗಂಭೀರವಾದ ಹೇಳಿಕೆಯನ್ನು ಮಾಡಿದ್ದಾನೆ. ವಚನ 2ರಲ್ಲಿ ಯೇಸು "ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ" ಎಂದು

ಯೇಸು ಹೇಳಿದನು. ವಚನ 6 "... ಬೆಂಕಿಯಲ್ಲಿ ಹಾಕುವುದರ ಬಗ್ಗೆ" ಮತನಾಡುವುದಾಗಿದೆ. ಹೇಗೋ ಪರಿಚ್ಛೇದವು ನಾವು ಆತ್ಮವನ್ನು ಗೆಲ್ಲುವವರಾಗಿಲ್ಲದ ಕಾರಣದಿಂದ ಅಥವಾ ನಾವು ಇತರ ಮಾರ್ಗದಿಂದ ಫಲವನ್ನು ಕೊಡಲು ಅಸಮರ್ಥರಾಗಿದ್ದುದರಿಂದ ನಾವು ನರಕಕ್ಕೆ ಹೋಗುತ್ತೇವೆ ಎಂದು ಹೇಳುವುದಿಲ್ಲ. ಬದಲಾಗಿ, ನಾವು ಯೇಸುವಿನೊಡನೆ ಸರಿಯಾದ ಸಂಬಂಧವನ್ನು ಹೊಂದದೇ ಇರುವ ಕಾರಣ ನಾವು ಅದನ್ನು ಕಳೆದುಕೊಳ್ಳುತ್ತೇವೆ ಎಂದು ಇದು ನಮಗೆ ಬೋಧಿಸುವುದಾಗಿದೆ. ತಿರುಗಿ ವಚನ 6ನ್ನು ನೋಡಿರಿ: "*ಯಾವನು ನನ್ನಲ್ಲಿ ನೆಲೆಗೊಂಡಿರುವುದಿಲ್ಲವೋ* ಅವನು ಆ ಕೊಂಬೆಯಂತೆ ಹೊರಕ್ಕೆ ಬೀಸಾಡಲ್ಪಟ್ಟು ಒಣಗಿ ಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟು ಹೋಗುತ್ತವೆ" ಎಂದಿದೆ (ಒತ್ತಿ ಹೇಳಿದ್ದು ನನ್ನದು).

ತಮ್ಮ ನಂಬಿಕೆಯನ್ನು ಹಂಚಿಕೊಳ್ಳದೆ ಕಾರಣಕ್ಕಾಗಿ ನೋಡುತ್ತಿರುವ ಕೆಲವರಿಗೋಸ್ಕರ: "ನಾನು ನಾಚಿಕೆ ಸ್ವಭಾವವುಳ್ಳವನು" ಅಥವಾ "ಜನರಿಗೆ ಇದರಲ್ಲಿ ಆಸಕ್ತಿಯಿಲ್ಲ," ಅಥವಾ "ನಾನು ಉತ್ತಮ ಶಿಕ್ಷಕನಲ್ಲ" ಅಥವಾ "ನನಗೆ ಸಾಕಷ್ಟು ತಿಳಿಯದು" ಅಥವಾ "ನನಗೆ ಸಮಯವಿಲ್ಲ" ಎಂದು ಅವರು ಹೇಳಬಹುದು. ಅವರು *ಸಂಬಂಧಕ್ಕಾಗಿ* ಹುಡುಕಲೇ ಬೇಕಾದಾಗ ಅವರು ಕಾರಣ/ನೆವಕ್ಕಾಗಿ ಹುಡುಕುವವರಾಗಿರುತ್ತಾರೆ. ಪೌಲನು ಹೀಗೆ ಬರೆಯುತ್ತಾನೆ. "*ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು* ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿಪ್ಪಿ 4:13; ಒತ್ತಿ ಹೇಳಿದ್ದು ನನ್ನದು).

## ಫಲಕೊಡುವ ಅವಶ್ಯಕತೆಗಳು

ಫಲಕೊಡುವುದರ ಹೃದಯವನ್ನು, ನಿಜ ದ್ರಾಕ್ಷೆಬಳ್ಳಿಯ ಜೊತೆ ನಮ್ಮ ಸಂಬಂಧವನ್ನು ನಾವು ಈಗಾಗಲೇ ಸ್ಥಾಪಿಸಿದ್ದೇವೆ, ಫಲಕೊಡುವುದಕ್ಕಾಗಿ ಕೆಲ ಪ್ರಾಯೋಗಿಕ ಅವಶ್ಯಕತೆಗಳನ್ನು ಹುಡುಕಲು ವೇದಭಾಗವನ್ನು ನೋಡಲು ನಾವು ಕೆಲ ಕ್ಷಣಗಳನ್ನು ತೆಗೆದುಕೊಳ್ಳುವಾ. ಸುವಾರ್ತಿಕ ಫಲಕೊಡುವದಕ್ಕಾಗಿ ಸುವಾರ್ತೆಯನ್ನು ಇತರರೊಡನೆ ಹಂಚಿಕೊಳ್ಳುವದು, ಸರಳವಾದ ಧ್ವನಿಯ ಅವಶ್ಯಕತೆಯು, ಒಳ್ಳೆಯ ವ್ಯಕ್ತಿಯ,[9] ಅಥವಾ ಗುರುತರವಾದ ಜ್ಞಾನದ ಮೊತ್ತದ ಅವಶ್ಯಕತೆಯು ಇದೆ ಎಂದು ಕೆಲವರು ಯೋಚಿಸುವವರಾಗಿದ್ದಾರೆ. ಈ ಪರಿಚ್ಛೇದವು ಇವುಗಳಲ್ಲಿ ಯಾವುದರ ಬಗ್ಗೆಯೂ ಹೇಳುವುದಿಲ್ಲ ಆದರೆ ಇದು ನಾಲ್ಕು ಅವಶ್ಯಕತೆಗಳ ಬಗ್ಗೆ ಹೇಳುವುದಾಗಿದೆ.

(1) *ವಿಧೇಯತೆಯ ಆತ್ಮ.* ದೇವರು ತೋಟಗಾರನಾಗಿದ್ದಾನೆ (ಯೋಹಾನ 15:1) - ಆತನು ತೋಟದ ಒಡೆಯನಾಗಿದ್ದಾನೆ. ಆತನು ಫಲದಾಯಕ ಕೊಂಬೆಗಳನ್ನೂ ಕೂಡಾ ಕತ್ತರಿಸುವವನಾಗಿದ್ದಾನೆ (ವಚನ 2). ತೆಗೆದುಹಾಕುವುದಕ್ಕೆ ಅವಶ್ಯಕವಾದ ಕೆಲ ಕೆಟ್ಟ ಗುಣಗಳನ್ನು ನಮ್ಮಲ್ಲಿ ಎಲ್ಲರೂ ಹೊಂದಿದ್ದೇವೆ! ಆತನಿಗೆ ಮತ್ತು ಯೇಸುವಿಗೆ ನಾವು ಯಾವಾಗಲೂ ನಮ್ರರಾಗಿರಲೇಬೇಕು "ನಾನು ನನ್ನ ತಂದೆ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲಗೊಂಡಿರುವ ಮೇರೆಗೆ ನೀವು ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ" ಎಂದು ಯೇಸು ಹೇಳಿದನು (ವಚನ 10).

(2) *ಜಾಗತರೂಕವಾದ ಮನಸ್ಸು.* ಯೇಸು ತನ್ನ ಶಿಷ್ಯರಿಗೆ "ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ" ಎಂದು ಹೇಳಿದನು (ವಚನ 3). "ಶುದ್ಧ" ಎಂಬ ಪದವು ಇದಕ್ಕೆ ಸಮಾನವಾದ ಗ್ರೀಕ್ ಪದವಾದ "ತೆಗೆದುಹಾಕು" ಎಂಬುದರಿಂದ ಬಂದದ್ದಾಗಿದೆ (ವಚನ 2). ದೇವರ "ತೆಗೆದುಹಾಕುವ ಸಾಧನವು" ಆತನ ವಾಕ್ಯವೇ ಆಗಿದೆ. ಯೇಸು ಆ ಹನ್ನೊಂದು ಮಂದಿಗೆ "... *ನನ್ನ ವಾಕ್ಯಗಳು* ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ. ಅದು ನಿಮಗೆ ದೊರೆಯುವದು" (ವಚನ 7; ಒತ್ತಿ ಹೇಳಿದ್ದು ನನ್ನದು).

ಫಲವನ್ನು ಕೊಡುವುದಕ್ಕೆ - ವಿಶೇಷವಾಗಿ ಸೌರ್ವಾರ್ತಿಕ ಫಲಕೊಡುವುದಕ್ಕೆ ದೇವರ ವಾಕ್ಯದ ಜ್ಞಾನವು ಅವಶ್ಯವಾದದ್ದಾಗಿದೆ. ಬೈಬಲ್ ಅಧ್ಯಯನ ಮತ್ತು ಆತ್ಮಗಳನ್ನು ಗೆಲ್ಲುವದು ಎರಡೂ ಜೊತೆಯಾಗಿ ಸಾಗುತ್ತವೆ. ನಾನು ನಿಜವಾಗಿಯೂ ದೇವರ ವಾಕ್ಯವನ್ನು ತಿಳಿದಾದ್ದರೆ, ಅದನ್ನು ನಾನು ಹಂಚಿಕೊಳ್ಳಲು ಬಯಸುತ್ತೇನೆ; ಮತ್ತು ಅದನ್ನು ನಾನು ಹಂಚಿಕೊಂಡಿದ್ದಾದರೆ ಅದನ್ನು ಅದನ್ನು ಇನ್ನೂ ಹೆಚ್ಚಾಗಿ ಕಲಿಯುವ ಅವಶ್ಯಕತೆಯನ್ನು ನಾನು ಅನುಭವವನಾಗಿದ್ದೇನೆ. "ನೀತಿಗೆ ಹಸಿದು ಬಾಯಾರಿದವರು ಧನ್ಯರು, ಅವರು ತೃಪ್ತಿಯಾಗುವದು" ಎಂದು ಯೇಸು ಹೇಳಿದ್ದಾನೆ (ಮತ್ತಾಯ 5:6). ಕಷ್ಟದ ಕಾರ್ಯವು ಮಾಡುವಂತೆ ಯಾವದೊಂದೆ ನಮ್ಮ ಆಹಾರದ ಸ್ವಾದವನ್ನು ಸುದಾರಿಸದು, ಮತ್ತು ಕರ್ತನಿಗಾಗಿ ಕಾರ್ಯನಿರತವಾಗಿರುವುದನ್ನು ಬಿಟ್ಟರೆ ಅಂದರೆ ವಿಶೇಷವಾಗಿ ಸತ್ಯವನ್ನು ಹಂಚಿಕೊಳ್ಳುವದನ್ನು ಬಿಟ್ಟರೆ ಯಾವದೊಂದು ದೇವರ ವಾಕ್ಯದ "ಸ್ವಾದವನ್ನು" ಸುಧಾರಿಸದು.

(3) *ಸಮರ್ಪಿತವಾದ ಹೃದಯ.* ನಾವು ಯೇಸುವಿನೊಡನೆ ಇರುವ ಮೂಲಕ ನಮ್ಮನ್ನು ನಾವು ಸಮರ್ಪಿಸಿಕೊಳ್ಳಲೇಬೇಕು. ಯೋಹಾನ 15ರಲ್ಲಿನ ಆತನ ಸಂದೇಶದಲ್ಲಿ "ನನ್ನಲ್ಲಿ ನೆಲೆಗೊಳ್ಳಿರಿ" ಎಂದು ಹೇಳಿದ್ದಾನೆ (ವಚನ 4). ವಚನ 7ರಲ್ಲಿ, ಆತನು "*ನೀವು* ನನ್ನಲ್ಲಿ ನೆಲೆಗೊಂಡಿದ್ದರೆ" (ಒತ್ತಿ ಹೇಳಿದ್ದು ನನ್ನದು). ನೀವು ಆಶೀರ್ವಾದವನ್ನು ಹೊಂದುವಿರಿ. ಅನೇಕ ವಿಧದಲ್ಲಿ ಕರ್ತನೊಂದಿಗಿನ ನಮ್ಮ ಸಂಬಂಧವು ದ್ರಾಕ್ಷೆಯ ಕೊಂಬೆಯಂತಿದೆ ಎಂದು ನಾವು ಗಮನಿಸಿದ್ದೇವೆ. ಹೇಗೆ ಒಂದು ಹೋಲಿಕೆಯು ಮುರಿದು ಹೋಯಿತು: ದ್ರಾಕ್ಷಾಬಳ್ಳಿಗೆ ಕೊಂಬೆಗಳು ಅಂಟಿಕೊಂಡಿರುವುದನ್ನು ಬಿಟ್ಟರೆ ಆ ಕೊಂಬೆಗೆ ಇನ್ನೊಂದು ಆಯ್ಕೆಯು ಇಲ್ಲ - ಹಾಗೆಯೇ ನಮಗೂ ಸಹ.

ಬೈಬಲ್ ವಿಶ್ವಾಸಿಯ ಸುರಕ್ಷೆಯನ್ನು ಬೋಧಿಸುವುದಾಗಿದೆ, ಆದರೆ ಧರ್ಮತ್ಯಾಗದ ಅಸಾಧ್ಯತೆಯನ್ನಲ್ಲ. ನಂತರಲ್ಲಿ ನಾವು ಬಳ್ಳಿಗೆ ಹೊಂದಿಕೊಂಡಿದ್ದಾಗಲೂ ಕೂಡಾ, ನಾನು ಇನ್ನೂ ತೆಗೆಯಲ್ಪಡುತ್ತೇನೆ ಮತ್ತು "ಬೆಂಕಿಯಲ್ಲಿ ಹಾಕಲ್ಪಡುತ್ತೇನೆ" ಎಂದು ಯೋಹಾನ 15 ಬೋಧಿಸುವುದಾಗಿದೆ. ನಾನು ರಕ್ಷಿಸಲ್ಪಡಬೇಕಾದರೆ, ನಾನು ಕರ್ತನಲ್ಲಿ ನೆಲೆಗೊಂಡಿರಬೇಕು. ನ್ಯಾಯತೀರ್ಪಿನ ದಿನದಂದು ನಾನು ನನ್ನ ದೀಕ್ಷಾಸ್ನಾನದ ಮತ್ತು ರಕ್ಷಿಸಲ್ಪಟ್ಟ ಸರ್ಟಿಫಿಕೆಟನ್ನು[10] ತಳ್ಳಿ, "ನೋಡು ನಾನು ಇಂತಿಂಥ ದಿನದಂದು ದೀಕ್ಷಾಸ್ನಾನ ಹೊಂದಿದ್ದೇನೆ. ನೀನು ನನ್ನನ್ನು ಒಳಗೆ *ಇರಿಸಲೇಬೇಕು*" ಎಂದು ಹೇಳಲಾರೆನು. ದೀಕ್ಷಾಸ್ನಾನವು ರಕ್ಷಣೆಗೆ ಅವಶ್ಯವಾದದ್ದಾಗಿದೆ, ಆದರೆ ಅದೇ ರೀತಿಯಲ್ಲಿ ಕರ್ತನಲ್ಲಿ ನಂಬಗಸ್ತರಾಗಿ ಉಳಿಯುವದೂ ಆಗಿದೆ (ಪ್ರಕಟಣೆ 2:10). ಕೇವಲ "ಕ್ರಿಸ್ತನಲ್ಲಿ" ದೀಕ್ಷಾಸ್ನಾನ ಹೊಂದಿರುವದೇ ಮುಖ್ಯವಲ್ಲ (ರೋಮಾಪುರ 6:3, 4; ಗಲಾತ್ಯ 3:26, 27), ಆದರೆ "ಕ್ರಿಸ್ತನಲ್ಲಿ" *ಉಳಿಯುವದೂ* ಸಹ ಅತಿ ಮಹತ್ವದ್ದಾಗಿದೆ (ರೋಮಾಪುರ 3:24; 6:11, 23; 8:1, 39; 2 ಕೊರಿಂಥ 2:14; ಫಿಲಿಪ್ಪಿ 4:7, 19; 1 ಥೆಸಲೋನಿಕ 4:16).

(4) *ನಿಶ್ಚಲವಾದ ಮನೋಭಾವನೆ.* ಕೊಂಬೆಯ ಸ್ವಭಾವವು ಬೆಳೆಯುವುದಾಗಿದೆ. ಒಂದು ಸಾರಿ ಅವುಗಳ ಬೆಳೆಯುವಿಕೆಯು ನಿಂತುಹೋದರೆ, ಅವುಗಳು ಸತ್ತುಹೋಗುವವು. ಕೆಲವರು ಹೀಗೆ ಬರೆಯುತ್ತಾರೆ, "ಮರದ ಮೇಲಿನಿಂದ ಯಾವುದೇ ಹೊಸದಾದ ಚಿಗುರುಗಳು ಇಲ್ಲದೆ ಹೋದರೆ ಅದರ ಬೇರು ಸತ್ತು ಹೋಗುವುದಾಗಿರುತ್ತದೆ." ದೇವರ ಸಹಾಯದಿಂದ, ಕ್ರೈಸ್ತರಾದಂತ ನಾವು ಬೆಳೆಯುವೆವು ಎಂಬುದನ್ನು ನೀವ ಮತ್ತು ನಾನು ನಿಶ್ಚಯಿಸಿಕೊಳ್ಳುವದು ಅವಶ್ಯವಿದೆ. ವಿಶೇಷವಾಗಿ, ಫಲಕೊಡುವ ವಿಷಯದಲ್ಲಿ ನಮಗೆ ಬೆಳೆಯುವದು ಅವಶ್ಯವಿದೆ. ಯೋಹಾನ 15 "ಫಲದ" ಬಗ್ಗೆ ಮಾತನಾಡುವುದಾಗಿದೆ (ವಚನ 2), ಆದರೆ ಇದ "*ಹೆಚ್ಚಿನ* ಫಲ"ದ (ವಚನಗಳು 5, 8; ಒತ್ತಿ ಹೇಳಿದ್ದು ನನ್ನದು) ಮತ್ತು "*ಬಹಳ* ಫಲದ" ಬಗ್ಗೆಯೂ ಸಹ ಮಾತನಾಡುವುದಾಗಿದೆ (ವಚನ 2; ಒತ್ತಿ ಹೇಳಿದ್ದು ನನ್ನದು).

## ಫಲಕೊಡುವುದರ ಪರಿಣಾಮ

ಈ ಪ್ರಸಂಗವು ಮುಗಿಯುತ್ತಿದ್ದಂತೆಯೇ, ಫಲಕೊಡುವುದರ ಸಕಾರಾತ್ಮಕ ಪರಿಣಾಮದತ್ತ ನಾವು ಯೋಚಿಸುವಾ.[11]

*ನಾವು ಆತ್ಮೀಕವಾಗಿ ಬೆಳೆಯಬೇಕು.* ನಾವು ಶುದ್ಧೀಕರಿಸಲ್ಪಟ್ಟಿದ್ದೇವೆ; ನಾವು "ಹೆಚ್ಚಿನ ಫಲ"ವನ್ನೂ (ವಚನಗಳು 5, 8) ಮತ್ತು "ಬಹಳ ಫಲ"ವನ್ನೂ (ವಚನ 2) ಕೊಡಬೇಕು. ಈ ಪ್ರಸಂಗವು ಸೌವಾರ್ತಿಕ ಫಲಕೊಡುವಿಕೆಯ ಮೇಲೆ ಕೇಂದ್ರಿಕರಿಸುವುದಾಗಿದೆ. ಯಾವುದೇ ಕ್ರೈಸ್ತಿಯ ಚಟುವಟಿಕೆಗಳು ಆತ್ಮದ ಗೆಲ್ಲುವಿಕೆಗಿಂತ ಆತ್ಮಿಕ ಬೆಳವಣಿಗೆಗೆ ಹೆಚ್ಚು ಹತ್ತಿರವಾಗಿ ಸಂಬಂಧಿತವಾಗಿಲ್ಲ ಎಂದು ನಾನು ಬಲ್ಲೆನು.

*ನಮ್ಮ ಪ್ರಾರ್ಥನೆಗಳು ಉತ್ತರಿಸಲ್ಪಡುತ್ತವೆ* (ವಚನ 7). ನಿಮ್ಮ ಪ್ರಾರ್ಥನಾ ಜೀವಿತವು ಇದು ಹೀಗಾಗಬೇಕು ಎಂದಿಲ್ಲವಾದರೆ, ಯೇಸುವಿನೊಡನೆಯ ನಿಮ್ಮ ಸಂಬಂಧವನ್ನು ಪರೀಕ್ಷಿಸಿಕೊಳ್ಳಿರಿ ಮತ್ತು ನೀವು ಫಲವನ್ನು ಕೊಡುತ್ತಿದ್ದೀರಾ ಅಥವಾ ಇಲ್ಲವಾ ಎಂದು ನಿಮ್ಮನ್ನು ನೀವು ಕೇಳಿಕೊಳ್ಳಿರಿ.

*ದೇವರು ಮಹಿಮೆಯನ್ನು ಹೊಂದುವನು* (ವಚನ 8). ದ್ರಾಕ್ಷಾತೋಟವು ಅವನದು ಮತ್ತು ಆತನು ತೋಟಗಾರನು ಎಂಬುದನ್ನು ನೆನಪಿಡಿರಿ. ಕೊಂಬೆಗಳು ಫಲವನ್ನು ಕೊಟ್ಟಾಗ ಆತನು ಮಹಿಮೆಹೊಂದುವನು.

*ನಮ್ಮನ್ನು ನಾವು ಯೇಸುವಿನ ನಿಜ ಶಿಷ್ಯರು ಎಂದು ತೋರಿಸುವಾ* (ವಚನ 8).

*ನಾವು ಸಂತೋಷವನ್ನು ಹೊಂದುವಾ* (ವಚನ 11). ತನ್ನನ್ನು "ಸಂತೋಷ ಮತ್ತು ಕಿರೀಟವನ್ನಾಗಿ" ಮಾರ್ಪಡಿಸಿದಾತನನ್ನು ಪೌಲನು ಕರೆದನು (ಫಿಲಿಪ್ಪಿ 4:1). ನಂಬಿಕೆಯಲ್ಲಿರುವ ತನ್ನ "ಮಕ್ಕಳು" "ಸತ್ಯದಲ್ಲಿ ನಡೆಯುತ್ತಿರುವುದನ್ನು" ಕೇಳುವುದರ ಮುಂದೆ "ಯಾವುದೇ ದೊಡ್ಡ ಸಂತೋಷವಿಲ್ಲ" ಎಂದು ಯೋಹಾನನು ಹೇಳುತ್ತಾನೆ (3 ಯೋಹಾನ 4).

*ಆತ್ಮವು ರಕ್ಷಿಸಲ್ಪಟ್ಟಿತು* - ನಮ್ಮದು ಮತ್ತು ಇತರರದು!

## ಮುಕ್ತಾಯ

ಕ್ರಿಯ್ಮಾಕ ಸಭೆಯ ಭಾಗವಾಗಿರಲು ನಾನು ಬಯಸುವವನಾಗಿದ್ದೇನೆ. ಸಂತುಷ್ಟಿಯಾದ ಮತ್ತು ಕಾರ್ಯನಿರತನಾದ ಕ್ರೈಸ್ತನೊಡನೆ ಇರುವದು ಎಂಥಾ ಅದ್ಭುತವಾದದ್ದು! ಅದಲ್ಲದೆ, ನಾವು "ಪ್ರೋಜಕ್ಟಗಳ" ಜಂಜಾಟದಲ್ಲಿ ಇದ್ದುಕೊಂಡು ಕರ್ತನ ಸಭೆಯ ಉದ್ದೇಶವನ್ನು ಕಳೆದುಕೊಳ್ಳುವ ಭಯದಲ್ಲಿ ನಾವು ಇರುತ್ತೇವೋ ಏನೋ. ಕೆಲಸಾರಿ ನಾವು ಇರುವುದು ಎಂದರೆ ಕರ್ತನಿಗಾಗಿ ಫಲ ಕೊಡುವುದೇ ಆಗಿದೆ ಫಲಕೊಡುವುದಕ್ಕಾಗಿಂತ ಬೇರೆಯಾವ ಶ್ರೇಷ್ಟ ಸಂಗತಿಯು ಇಲ್ಲ. ಆತನಿಗಾಗಿ ಫಲಕೊಡುವವರಾಗಲು ದೇವರು ನಮ್ಮೆಲರಿಗೂ ಸಹಾಯಮಾಡಲಿ![12]

---

ಟಿಪ್ಪಣೆಗಳು

[1]*ಕ್ರಿಸ್ತನ ಜೀವಿತ ಚರಿತ್ರೆ,* 5ನೇ ಪುಸ್ತಕದಲ್ಲಿ "ಆತನು ಹೊರಟು ಹೋದನು" ಎಂಬ ಪಾಠದಲ್ಲಿ ಆಭರಣಗಳ ವಿವರಣೆ ಆಗಿದೆ. [2]ಈ ಪ್ರಸಂಗದಲ್ಲಿ ಆತ್ಮಗೆಲ್ಲುವುದರ ಮೇಲಿನ ಒತ್ತಿ ಹೇಳುವಿಕೆಯು ಆಗಿದೆ, ಆದರೆ ಆತ್ಮದ ಫಲ ಅಥವಾ ಕ್ರಿಸ್ತನ ತರಹದ ಜೀವಿತದ ನಡೆಸುವಿಕೆಯು ಒತ್ತಿ ಹೇಳುವಿಕೆಯು ಮಂಡನೆಯು ತೆಗೆದುಕೊ ಳ್ಳಲ್ಪಟ್ಟಿದೆ. [3]"ಫಲ" ಎಂಬ ಪದವು ಅನೇಕ ಬಳಕೆಯನ್ನು ಹೊಂದಿದೆ. ಇಬ್ಬೊಬ್ಬ ವ್ಯಕ್ತಿಯ ಜೀವಿತದಲ್ಲಿ ನೀವು ಏನನ್ನು ನೋಡುತ್ತೀರೋ (ಮತ್ತಾಯ 3:10; 7:16-20); ನಂಬಿಗಸ್ತಿಕೆಯ ಪರಿಣಾಮ, ಉತ್ಪಾದಾತ್ಮಕ ಕ್ರಿಸ್ತೀಯ ಜೀವಿತ (ಎಫೆಸ 5:9; ಫಿಲಿಪ್ಪಿ 1:11; ಕೊಲಸ್ಸೆ

1:10; ಇಬ್ರಿಯ 12:11; ಯಾಕೋಬ 3:17, 18); ಅಥವಾ ಪರಿಣಾಮ ಅಥವಾ ಬಹುಮಾನದ ಶ್ರಮವು ವಿಸ್ತರಿಸಲ್ಪಟ್ಟದ್ದು (ಯೋಹಾನ 4:36; 12:24). "ಮೊಲ ಫಲ" ಎಂಬ ಪದವು (ರೋಮಾಪುರ 8:23; 1 ಕೊರಿಂಥ 15:20, 23; 16:15) ಇದೊಂದು ರೂಪಕವಾಗಿದ್ದು ಹಳೆಯ ಒಡಂಬಡಿಕೆಗೆ ಸಂಬಂಧಿಸಿದ ಕರ್ತನಿಗೆ ಸಮರ್ಪಿತವಾಗಿರುವ ಮೊದಲ ಫಲ (ಸುಗ್ಗಿಯ ಮೊದಲ ಫಲ)ದ ಆಧಾರಿತವಾದದ್ದಾಗಿದೆ ಎಂದು ಅದು ಸೂಚಿತಬಹುದಾಗಿದೆ. [4]Alfred Marshall, *The Interlinear Greek-English New Testament,* 2d ed. (London: Samuel Bagster and Sons, 1958), 136. [5]ನೀವು ಮಾತನಾಡುವಾಗ "ಕೆಟ್ಟ ಸುದ್ದಿಯ" ಟಿವಿ ಮತ್ತು ವೃತ್ತಪತ್ರಿಕೆಗಳಲ್ಲಿ ರಾರಾಜಿಸುವ ಆಧಾರವನ್ನು ಮಾಡಬಹುದು. [6]ನೀವು ಬೋಧಿಸುವಲ್ಲಿ ಹೊಂದಿಕೆಯಾಗುವಂತೆ ಈ ಪರಿಚ್ಛೇದವನ್ನು ತೆಗೆದುಕೊಳ್ಳಿರಿ. ಒಂದು ನಿರ್ಧಿಷ್ಟ ಪದ್ಧತಿಯನ್ನು ನೀವು ಸೂಚಿಸುವುದಾದರೆ ಇದರ ಒಂದು ಅಥವಾ ಎರಡು ಮಾತನ್ನು ಇದರ ಬಗ್ಗೆ ಹೇಳಿರಿ. ಸುವಾರ್ತೆ ಸಾರುವಿಕೆಯ ಅಂಥ ಪದ್ಧತಿಗಳನ್ನು ಹೇಗೆ ಉಪಯೋಗಿಸಬೇಕೆಂದು ವರ್ಗದಲ್ಲಿ ನೀವು ಹೇಳಲೂ ಬಹುದು. [7]ನಾನು ಒಂದು ವೈಯಕ್ತಿಯ ಉದಾಹರಣೆಯನ್ನು ಇದಕ್ಕೆ ಕೂಡಿಸುವವನಾಗಿದ್ದೇನೆ: "ನನ್ನ ಬೋಡು ತಲೆಯನ್ನು ನಾನು ಉಜ್ಜಿಕೊಳುತ್ತಾ, ಕೂದಲು ಬೆಳೆಯಲು ಖಚಿತವಿರುವ ಟಾನಿಕ್‌ನ್ನು ಮಾರುವದು ನನಗೆ ಕಠಿಣವಾಗಿದೆ" ಎಂದು ಕೊಂಡೆನು. [8]"ಪತ್ರಹರಿತ್ತು" ಗ್ರೀಕಪದವನ್ನು ಪ್ರತಿನಿಧಿಸುವಂತ "ಹಸಿರು" ಎಂಬ ಅರ್ಥವನ್ನು ಕೊಡುವ ಪದವಾಗಿದೆ. ಇದು ಎಲೆಗಳಲ್ಲಿನ ಹಸಿರನ್ನು ಸೂಚಿಸುವುದಾಗಿದೆ. [9]USನಲ್ಲಿ "ನಮ್ಮಲ್ಲಿ ಕೆಲವರು ಐವತ್ತು ಯಾರ್ಡ್ ಲೈನಿನಲ್ಲಿರುವ ತಮ್ಮ ಸೀಟನ್ನು ಐವತ್ತು ಸೆಂಟಿಗೆ ಊಟದ ಬಟ್ಟಲಿಗೆ ಮಾರಲಾರರು" ಎಂದು ನಾನು ಸೇರಿಸಬಹುದು. [10]ನನ್ನ ಸ್ವಂತ ದೀಕ್ಷಾಸ್ನಾನಕ್ಕೆ ಸಂಬಂಧಪಟ್ಟಂತ ಯಾವುದೇ ವಿಧವಾದ ದಾಖಲೆಗಳನ್ನು ನಾನು ಹೊಂದಿಲ್ಲ, ಆದರೆ ನಾನು ಕೆಲಸಮಾಡುತ್ತಿರುವ ಸಭೆಯಲ್ಲಿ, ನೀರಿನಲ್ಲಿ ಮುಳುಗಿಸಲ್ಪಟ್ಟ ಪ್ರತಿಯೊಬ್ಬರಿಗೋ ದೀಕ್ಷಾಸ್ನಾನದ ಪ್ರಮಾಣಪತ್ರಗಳನ್ನು ಕೊಡುವ ರೂಢಿಯನ್ನು ನಾವು ಮಾಡಿಕೊಂಡಿದ್ದೇವೆ, ನೀವು ಇರುವೆಡೆ ಈ ಅಭ್ಯಾಸವು ಇಲ್ಲದೇ ಹೋದರೆ ಇದನ್ನು ಸೇರಸಿಕೊಳ್ಳಿರಿ.

[11]ಓದಲು ಸೂಚಿಸಲ್ಪಟ್ಟ ಪರಿಚ್ಛೇದಗಳು ಮತ್ತು ಭಾಗಗಳು ಕೂಡಾ ವಿಸ್ತರಿಸಲ್ಪಡಬಹುದು. [12]ನೀವು ಆಮಂತ್ರಣವನ್ನು ಮಾಡಿದಾಗ, ಪಶ್ಚಾತ್ತಾಪಪಟ್ಟ ಮತ್ತು ಹಾಗೆ ಉಳಿಯುವ ಅವಶ್ಯಕತೆಯಿರುವ (ನೆಲೆಗೊಂಡಿರುವ) ವಿಶ್ವಾಸಿಯಂತೆ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದುವುದರ ಅವಶ್ಯಕತೆಯನ್ನು ತಿರುಗಿ ಒತ್ತಿ ಹೇಳಬಹುದು. ದೀಕ್ಷಾಸ್ನಾನ ಹೊಂದದೆ ಇರುವವರನ್ನು ಅಥವಾ ಕರ್ತನಿಂದ ದೂರವಿರುವವರನ್ನು ಪ್ರತಿಕ್ರಯಿಸುವುದಕ್ಕಾಗಿ ಪ್ರೋತ್ಸಾಹಿಸಿರಿ.